# ಕಂಪ್ಲಿಯ 'ಕುಮಾರ ರಾಮ': ಒಂದು ಚಾರಿತ್ರಿಕ ನೋಟ

**ನಾಯಕರ ಹುಲುಗಪ್ಪ**
ಸಹಾಯಕ ಸಂಶೋಧನಾಧಿಕಾರಿ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ಶಿಗ್ಗಾವಿ,
ಹಾವೇರಿ.

**Article Link: https://aksharasurya.com/2024/04/nayakara-hulugappa.php**

**DOI: https://doi.org/10.5281/zenodo.10938118**

## ABSTRACT:

ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಕುಮಾರ ರಾಮನ ಇತಿಹಾಸ ಭವ್ಯವಾದುದು ಮತ್ತು ಅಮೋಘವಾದುದು. ತಾನು ಬದುಕಿ ಬಾಳಿದ ಕಡಿಮೆ ಅವಧಿಯಲ್ಲಿ ಚರಿತ್ರೆಯನ್ನು ಸೃಷ್ಟಿಸಿದ ತಳಸಮುದಾಯದ ವ್ಯಕ್ತಿ ಎಂದರೆ ಕುಮಾರರಾಮ. ಇವರ ಕುಮ್ಮಟದುರ್ಗದ ಮನೆತನದ ಇತಿಹಾಸ ಕೇವಲ ಐವತ್ತು ವರ್ಷ. ಆ ಸಂದರ್ಭದಲ್ಲಿ ಉತ್ತರ ಭಾರತದ ಬಲಾಢ್ಯ ಮುಸ್ಲಿಂ ಸೈನ್ಯವನ್ನು ದಕ್ಷಿಣದ ಕಡೆಗೆ ಬಾರದಂತೆ ತಡೆದಿದ್ದ ವ್ಯಕ್ತಿ ಕುಮಾರರಾಮ. ಅಂತಹ ವ್ಯಕ್ತಿಯ ಐತಿಹಾಸಿಕ ನೋಟವನ್ನು ಈ ಲೇಖನದ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದೇನೆ.

ವಿಜಯನಗರ ಪೂರ್ವದ ಇತಿಹಾಸದಲ್ಲಿ ಕುಮ್ಮಟದ ನಾಯಕರ ಮನೆತನದಲ್ಲಿ ಮೂರನೇಯ ಹಾಗೂ ಕೊನೆಯ ಅರಸನಾಗಿ ಕುಮಾರ ರಾಮ ಉಲ್ಲೇಖಿತನಾಗಿದ್ದ. ಐತಿಹಾಸಿಕ ಆಕರಗಳಲ್ಲಿ ಈತನ ಬಗೆಗೆ ಹೆಚ್ಚಿನ ವಿವರಗಳು ಲಭಿಸದೆ ಹೋದರೂ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ, ಆಧುನಿಕ ಪೂರ್ವ ಸಾಹಿತ್ಯ ಕೃತಿಗಳಲ್ಲೂ ಈತನ ಬಗೆಗೆ ಸಾಕಷ್ಟು ವಿವರಗಳು ಲಭ್ಯವಾಗುತ್ತವೆ. ಪರನಾರಿ ಸಹೋದರನಾಗಿ, ಶತ್ರು ಸೈನ್ಯದ ವಿರುದ್ಧ ವೀರಾವೇಶದಿಂದ ಹೋರಾಡಿದ ಪರಾಕ್ರಮಿ ಎಲ್ಲಕ್ಕೂ ಮುಖ್ಯವಾಗಿ ಜನಪದರ ಆರಾಧ್ಯ ದೈವವಾಗಿ, ಸ್ಥಳೀಯ ಜನಮಾಸದಲ್ಲಿ ನೆಲೆ ನಿಂತಿರುವ ಕುಮಾರ ರಾಮ ಕನ್ನಡ ನಾಡಿನ ಓರ್ವ ಸಾಂಸ್ಕ್ರತಿಕ ನಾಯಕನನ್ನಾಗಿ ಕಾವ್ಯಗಳು ರಚನೆಗೊಂಡಿವೆ. ಅವುಗಳಲ್ಲಿ ಹದಿನಾರನೇ ಶತಮಾನದ ನಂಜುಂಡ ಕವಿಯ 'ರಾಮನಾಥ ಚರಿತೆ'ಯು ಕುಮಾರ ರಾಮನ ಸಾಂಗತ್ಯ ಎಂದೇ ಪ್ರಸಿದ್ಧವಾಗಿದೆ. ಐತಿಹಾಸಿಕ ಆಕರಗಳೊಂದಿಗೆ ಸಾಂಗತ್ಯ ಕೃತಿಯನ್ನು ಪ್ರಮುಖ ಆಧಾರವಾಗಿಸಿಕೊಂಡು ಹೊಸಗನ್ನಡ ಸಂದರ್ಭದಲ್ಲೂ ಕುಮಾರ ರಾಮನಿಗೆ ಸಂಬಂಧಿಸಿದ ವಿವಿಧ ಪ್ರಕಾರಗಳು ಹಲವಾರು ಕೃತಿಗಳು ರಚನೆಗೊಂಡಿವೆ.

ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಐತಿಹಾಸಿಕ ವ್ಯಕ್ತಿ ಮತ್ತು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಸ್ಫೂರ್ತಿ ಎಂದು ಪೂಜಿಸಲ್ಪಟ್ಟಿದ್ದಾನೆ. ಕುಮಾರ ರಾಮ ಕಂಪ್ಲಿ ಕೋಟೆಯ, ಕಂಪಿಲಿ ರಾಯನ ಮಗ. ಕಂಪ್ಲಿ ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿರುವ ಒಂದು ಪಟ್ಟಣವಾಗಿದೆ ಮತ್ತು ಇದು ಕಂಪ್ಲಿ ತಾಲೂಕಿನ ಕೇಂದ್ರಸ್ಥಾನವಾಗಿದೆ.

ಕುಮಾರ ರಾಮನು ವಾರಂಗಲ್‌ನ ಕಾಕತೀಯರು, ಹಳೇಬೀಡಿನ ಹೊಯ್ಸಳರು ಮತ್ತು ಉತ್ತರ ಭಾರತದ ಮುಸ್ಲಿಂ ಅರಸರ ನಡುವೆ ನಿರಂತರ ಯುದ್ಧಗಳನ್ನು ಮಾಡಿ ಜಯಶೀಲನಾಗಿದ್ದನು. ಉತ್ತಮ ಸದ್ಗುಣಗಳನ್ನು ಹೊಂದಿದ್ದ ಕುಮಾರ ರಾಮನು, ತನ್ನ ಚಿಕ್ಕ ವಯಸ್ಸಿನಲ್ಲಿಯೇ ಮುಸ್ಲಿಂ ಸೇನೆಯೊಂದಿಗೆ ಹೋರಾಡಿ ಮರಣಹೊಂದಿದನು.

**KEYWORDS:**

ಮಧ್ಯಕಾಲೀನ ಕರ್ನಾಟಕ, ಕಂಪಿಲಿರಾಯ, ರತ್ನಾಜಿ, ಕುಮಾರರಾಮ, ವಿಜಯನಗರ ಪೂರ್ವದ ಇತಿಹಾಸ, ಸಾಹಿತ್ಯ, ನಂಜುಂಡ ಕವಿ.

ಇತಿಹಾಸದಲ್ಲಿ ಮಸುಕಾಗಿರುವವರ ಜೀವನ ಚರಿತ್ರೆಯನ್ನು ಸಿಗುವ ಅಲ್ಪ ಆಧಾರಗಳಲ್ಲಿ ಕಟ್ಟಿಕೊಡುವ ಕೆಲಸ ಇಂದಿನ ಇತಿಹಾಸಕಾರರ ಮೇಲಿದೆ. ಹಾಗೆಯೇ ಇಂತಹ ಮಸುಕಾಗಿರುವರಲ್ಲಿ ಒಬ್ಬರಾಗಿರುವ ಕುಮಾರ ರಾಮನ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ನನಗೆ ಕಂಡುಬರುವ ಕೆಲವು ಆಕರಗಳ ಮೂಲಕ ಅವರ ಒಂದು ಜೀವನ ಚಿತ್ರಣವನ್ನು ಈ ಲೇಖನದ ಮೂಲಕ ಕಟ್ಟಿಕೊಡಲಾಗಿದೆ.

ಈಗಾಗಲೇ ಹಲವಾರು ಜನ ಇತಿಹಾಸಕಾರರು ಕುಮಾರ ರಾಮನ ವಿಚಾರವಾಗಿ ತಮ್ಮ ಅಭಿಪ್ರಾಯಗಳನ್ನು ಲಿಖಿತವಾಗಿ ದಾಖಲಿಸಿದ್ದಾರೆ. ಅದರಲ್ಲಿ ವಿದೇಶಿ ಚರಿತ್ರೆಕಾರರಾದ ಬರನಿ, ಫೇರಿಸ್ತಾ, ಇಸಾಮಿ, ಇಬ್ನಬತೂತ, ನ್ಯೂನಿಜ್ ಇವರ ಹೊತ್ತಿಗೆಗಳು ಕುಮಾರರಾಮನ ಬಗ್ಗೆ ಸುಳಿವು ನೀಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹಾಗೆಯೇ ಕುಮಾರರಾಮನ ಇತಿಹಾಸ ತಿಳಿಸುವಲ್ಲಿ ಕೆಲವು ಪ್ರವಾಸಿಕಾರರ ಬರಹಗಳು ಪ್ರಮುಖ ಪಾತ್ರ ವಹಿಸುತ್ತವೆ. ಅವುಗಳೆಂದರೆ ಫ್ರಾನ್ಸಿಸ್, ಬುಕಾನನ್‌ನ ಪ್ರವಾಸ ವೃತ್ತಾಂತ, ಮೆಕೆಂಜಿಯ ಹಸ್ತಪ್ರತಿ ಹಾಗೂ ಇತರ ಕೈಫಿಯತ್ತು ಇವುಗಳ ಆಧಾರದ ಮೇಲೆ ಫಾದರ್ ಎಚ್.ಹೆರಾಸ್, ರಾಬರ್ಟ್ ಸಿವೇಲ್, ಲೂಯಿ ರೈಸ್, ವಿನ್ಸಂಟ್ ಸ್ಮಿತ್ ಮುಂತಾದವರು ಕುಮಾರರಾಮನ ಐತಿಹಾಸಿಕತೆಯನ್ನು ಖಚಿತಪಡಿಸಿದ್ದಾರೆ. ಅವನು ವಾಸಿಸುತ್ತಿದ್ದ ಕೋಟೆ ಕೊತ್ತಲಗಳ ಪ್ರದೇಶದ ಮೇರೆಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಹೀಗೆ ಚರಿತ್ರೆಕಾರರ ದೃಷ್ಟಿಯಲ್ಲಿ

ಕುಮಾರರಾಮ ಕಾಣಿಸಿಕೊಂಡಿದ್ದಾನೆ.

ಇತಿಹಾಸಕಾರರ ಅಭಿಪ್ರಾಯಗಳಲ್ಲದೇ ಶಾಸನಗಳಲ್ಲಿಯೂ ಕುಮಾರರಾಮನನ್ನು ಕುರಿತು ಕುರುಹುಗಳು ದೊರಕುತ್ತವೆ. ಕ್ರಿ.ಶ ಹದಿಮೂರನೆಯ ಶತಮಾನದ ದಾವಣಗೆರೆ ಜಿಲ್ಲೆ ಹರಿಹರದ ಶಾಸನವು ಸೇವುಣ ರಾಮಚಂದ್ರನ ಆಳ್ವಿಕೆಯ ಕಾಲಕ್ಕೆ ಸೇರಿದ್ದಾಗಿದೆ. ಮುಮ್ಮಡಿ ಸಿಂಗ ನಾಯಕನ ಮಗನಾದ ಖಂಡೇರಾಯನು ದೇವಾಲಯವೊಂದಕ್ಕೆ ಹರಿಹರ ಗ್ರಾಮವನ್ನು ಪುನರ್‌ದತ್ತಿಯಾಗಿ ನೀಡುತ್ತಾನೆಂದು ಇದು ತಿಳಿಸುತ್ತದೆ. ಕಂಪಿಲದೇವನಿಗೆ ಖಂಡೇರಾಯ ಎಂಬ ಹೆಸರು ಇತ್ತು ಎಂಬುದು ತಿಳಿದುಬರುತ್ತದೆ. ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಹಂಪೆಯ ಹೇಮಕೂಟದ ದೇವಾಲಯದ ಮುಂದೆಯಿರುವ ಶಾಸನವು ಮುಮ್ಮಡಿ ಸಿಂಗನಾಯಕನ ಮಗನಾದ ಕಂಪಿಲದೇವನು, ಸಂಗಮೇಶ್ವರ ದೇವರ ಆರಾಧಕನಾಗಿದ್ದನೆಂದು ತಿಳಿಸುತ್ತದೆ. ತನ್ನ ತಾಯಿ ಮತ್ತು ತಂದೆ ಪೆರಮನಾಯಕ ಇವರ ಜ್ಞಾಪಕಾರ್ಥವಾಗಿ ಶಿವಾಲಯವೊಂದನ್ನು ಕಟ್ಟಿಸಿದನೆಂದು ಅಲ್ಲಿ ಲಿಂಗಗಳನ್ನು ಪ್ರತಿಷ್ಠಾಪನೆ ಮಾಡುತ್ತಾನೆಂದು ಆ ಶಾಸನವು ತಿಳಿಸುತ್ತದೆ.

ಕುಮ್ಮಟದುರ್ಗದಲ್ಲಿ ಕ್ರಿ.ಶ. 1315ರಲ್ಲಿ ವೀರಗಲ್ಲು ಶಾಸನವನ್ನಾಧರಿಸಿ ಕಂಪಿಲದೇವನು ಹೊಯ್ಸಳ ವಂಶದ ಒಂದು ಶಾಖೆಗೆ ಒಳಪಟ್ಟವನೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಹಂಪೆಯ ಪ್ರಸನ್ನ ವಿರೂಪಾಕ್ಷ ದೇವಾಲಯದ ಹತ್ತಿರ ಇರುವ ಕಂಪಿಲರಾಯನಿಗೆ ಸಂಬಂಧಿಸಿದ ಶಾಸನವನ್ನು ಆಧರಿಸಿ ಆರ್.ಎಸ್ ಪಂಚಮುಖಿಯವರು ಕುಮಾರ ರಾಮನ ವಂಶಾವಳಿಯನ್ನು ಈ ರೀತಿಯಾಗಿ ಗುರುತಿಸಿದ್ದಾರೆ.

ಪರಮನಾಯಕ (?)
↓
ಮುಮ್ಮಡಿ ಸಿಂಗನಾಯಕ
↓
ಮಾದನಾಯಕ
↓
ವೀರ ಕಂಪಿಲದೇವ
↓
ಕುಮಾರ ರಾಮನಾಥ

ಜಿ.ವರದರಾಜ್ ಅವರು ಸಂಡೂರಿನ ರಾಮಘಡದಲ್ಲಿ ದೊರೆತ ಶಾಸನವನ್ನಾಧರಿಸಿ

ವಂಶಾವಳಿಯನ್ನು ಹೀಗೆ ನಿರೂಪಿಸಿದ್ದಾರೆ.

ಮುಮ್ಮಡಿ ಸಿಂಗ

↓

ಖಂಡೇರಾಯ(ಕಂಪಿಲರಾಯ)

↓

ವೀರಗುಜ್ಜಲ ಹರಿಹರದೇವಿ

↓

ಹೊಸಮಲೆ ರಾಮನಾಥ ಒಡೆಯ

ಚನ್ನಬಸಪ್ಪ ಪಾಟೀಲ ಅವರು ಕುಮ್ಮಟದ ಶಾಸನವನ್ನಾಧರಿಸಿ ಕುಮಾರ ರಾಮನ ವಂಶಾವಳಿಯನ್ನು ಈ ಕೆಳಗಿನಂತೆ ಗುರುತಿಸಿದ್ದಾರೆ.

ಪರಮನಾಯಕ (?)

↓

ಮುಮ್ಮಡಿ ಸಿಂಗನಾಯಕ

↓

ಮಾದನಾಯಕಿತಿಯೊಡನೆ ವಿವಾಹ

↓

ಖಂಡೇರಾಯ ಅಲಿಯಾಸ್ ಕಂಪಿಲರಾಯ

↓

ಗುಜ್ಜಲ ಹರಿಯಾಲದೇವಿಯೊಡನೆ ವಿವಾಹ

↓

ಕುಮಾರ ರಾಮನಾಥ

ಈ ವಂಶಾವಳಿಗಳೆಲ್ಲಾ ಹೆಚ್ಚು ಕಡಿಮೆ ಸಾಮ್ಯತೆಯಿಂದ ಕೂಡಿವೆ. ಕುಮ್ಮಟದುರ್ಗದಲ್ಲಿ ಕಂಡುಬಂದ ವೀರಗಲ್ಲು ಶಾಸನಗಳು, ಸುಲ್ತಾನನ ದಾಳಿಗಳು, ರಾಮನಾಯಕ ಮತ್ತು ಸಿಂಗ ವೀರರು ಕದನಗಳಲ್ಲಿ ಹೋರಾಡುತ್ತಾ ಮಡಿದರೆಂದು ತಿಳಿಸುತ್ತವೆ. ಈತನನ್ನು ಕುರಿತು ಶಾಸನಗಳು ಧಾರವಾಡ ಜಿಲ್ಲೆಯ ಸಂಗೂರು, ಬಳ್ಳಾರಿ ಜಿಲ್ಲೆಯ ರಾಮಘಡ ಮತ್ತು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮೊದಲಾದ ಕಡೆಗಳಲ್ಲಿ ಲಭಿಸಿವೆ. ಕೆಲವು ಕೈಫಿಯತ್ತುಗಳು ದೊರೆತಿವೆ. ಈತನ ಪೂಜೆಗಾಗಿ ದೇವಾಲಯಗಳನ್ನು ಕಟ್ಟಿರುವ ವಿಚಾರಗಳು ಶಾಸನಗಳಲ್ಲಿ ಉಕ್ತವಾಗಿವೆ.

ಹೀಗೆ ಶಾಸನಗಳಲ್ಲಿ ಕುಮಾರ ರಾಮನ ಅಸ್ತಿತ್ವ ಮತ್ತು ಅವನ ಮನೆತನದ

ಬಗ್ಗೆ ವಿವರಗಳು ಸಿಗುತ್ತವೆ. ಕೈಫಿಯತ್ತು ಹಾಗೂ ಚರಿತ್ರೆಕಾರರು ಕುಮ್ಮಟದುರ್ಗ ಕಂಪಿಲ ಕುಮಾರ ರಾಮನ ಚರಿತ್ರೆಯ ಅಂಶಗಳನ್ನು ನೀಡಿದ್ದಾರೆ. ಕುಮಾರ ರಾಮನ ಕಥೆ ಲಿಖಿತ ಮಾಧ್ಯಮಗಳಲ್ಲಿ ಪ್ರಸಾರಗೊಳ್ಳುವ ಪೂರ್ವದಲ್ಲಿಯೇ ಮೌಖಿಕ ಪರಂಪರೆಯಲ್ಲಿ ಮುಂದುವರಿದುಕೊಂಡು ಬಂದಿದೆ. ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಾದ ಹಾಡು, ಕಥೆ, ಕಥನಗೀತೆ, ಸಾಂಗತ್ಯ, ಮಹಾಕಾವ್ಯಗಳಲ್ಲಿ ಬಿಂಬಿತವಾಗಿದೆ. ಜನಪದ ರಂಗಕಲೆಗಳಾದ ತೊಗಲುಗೊಂಬೆಯಾಟ, ಬಯಲಾಟ, ಸಣ್ಣಾಟ, ಯಕ್ಷಗಾನಗಳಲ್ಲಿ, ಕುಮಾರ ರಾಮ ಮೂಡಿ ಬಂದಿದ್ದಾನೆ. ಜನಪದ ಆಚರಣೆ ಸಂಪ್ರದಾಯಗಳಲ್ಲಿ ಉತ್ಸವ ಪರ್ವಗಳಲ್ಲಿ ಒಟ್ಟಾರೆ ಸಾಂಸ್ಕೃತಿಕ ಬದುಕಿನಲ್ಲಿ ಆತ ಚಿರಸ್ಮರಣಿಯಾಗಿದ್ದಾನೆ. ನುಡಿಗಟ್ಟಿನಿಂದ ಮಹಾಕಾವ್ಯದವರೆಗೆ ಜನಪದ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಿವೆ. ಇಲ್ಲಿ ಹಬ್ಬ ಹರಿದಿನ ಮೊದಲಾದ ಆಚ ರಣೆಗಳಲ್ಲಿ ಕುಮಾರ ರಾಮನ ಜೀವನ ಅಭಿವ್ಯಕ್ತವಾಗಿದೆ. ಉದತ್ತನಾಯಕನಾದ ಕುಮಾರರಾಮ ಜೀವನವು ಅವನು ಬದುಕಿರುವಾಗ ಅಥವಾ ತೀರಿಹೋದ ಮೇಲೆ ದಂತಕಥೆಯ ಸ್ವರೂಪ ಪಡೆದುಕೊಂಡಿತು. ಅವನ ಭವ್ಯ ಜೀವನವನ್ನು ಜನಪದ ಕವಿಗಳು ಮಹಾಕಾವ್ಯದ ವ್ಯಾಪ್ತಿಯಲ್ಲಿ ವರ್ಣಿಸಿರುವುದು ಗಮನಾರ್ಹ.

ಕುಮಾರ ರಾಮನು ದುಂದಮ ಜಗ್ಗಲಿಕೆಯ ಹಾಡು ಲಾವಣಿ, ತಂಬೂರಿ, ಸಂಪ್ರದಾಯ ಹೀಗೆ ಗೀತೆಯ ನಾನಾ ಪ್ರಕಾರಗಳಲ್ಲಿ ಪ್ರಸಾರಗೊಂಡಿದ್ದಾನೆ. ಬಿ.ಎಸ್. ಗದ್ದಿಗಿಮಠ, ಅವರು ಸಂಪಾದಿಸಿರುವ ಜನಪದ ಗೀತೆಗಳು ಎಂಬ ಸಂಕಲನದಲ್ಲಿ ಕುಮಾರ ರಾಮನನ್ನು ವಸ್ತುವಾಗಿರಿಸಿಕೊಂಡ ಕಂಪಲಿ ಮತ್ತು ಕರ್ನಾಟಕದ ಕಂದ ಎಂಬ ಎರಡು ಗೀತೆಗಳಿವೆ. ಇಲ್ಲಿ ನೈತಿಕ ಮೌಲ್ಯದ ರಕ್ಷಣೆಗೆ ಬದ್ಧನಾದ ಅವನನ್ನು ಬಲತ್ಕಾರದ ಅಪವಾದ ಹೊರಿಸಿ ದುರಂತಕ್ಕೆ ಈಡು ಮಾಡಲಾಯಿತು ಎಂಬುದೇ ಈ ಗೀತೆಗಳ ಕಥಾವಸ್ತು.

ಕುಮಾರ ರಾಮನನ್ನು ಕುರಿತು ಜನಪ್ರಿಯವಾದ ಹಾಡುಗಳಿರುವಂತೆಯೇ ಜನಜನಿತವಾದ ಕಥೆಗಳು ಇವೆ. ಇವನ ಕುರಿತು ಗೊಂದಲಿಗರು, ಬುರ್ರಕಥಾ, ಬಾಲನಾಗಮ್ಮ ಸಂಪ್ರದಾಯದವರು ಈ ಕಥೆಯನ್ನು ದೀರ್ಘವಾಗಿ ಮತ್ತು ಆಕರ್ಷಣೀಯವಾಗಿ ಹೇಳುತ್ತಾರೆ. ಕುಮಾರ ರಾಮನ ಜೀವನ ಜನಪದ ಸಾಹಿತ್ಯ ಪರಂಪರೆಯಲ್ಲಿ ಕಥೆ, ಕಾವ್ಯವಾಗಿ ಉಳಿದು ಬೆಳೆದುಕೊಂಡು ಬಂದಿದೆ. ಮೌಖಿ ಕವಾದ ಈ ಶಬ್ದ ಮಾಧ್ಯಮದ ಜೊತೆಗೆ ಜನಪದ ಸಂಪ್ರದಾಯ, ಆಚ ರಣೆಗಳಲ್ಲಿಯೂ ಸ್ಥಾನ ಪಡೆದುಕೊಂಡ ಸಂಗತಿಗಳು ಸಿಗುತ್ತವೆ. ಕನ್ನಡ ನಾಡಿನ ವಿವಿಧೆಡೆಗಳಲ್ಲಿ ಕುಮಾರ ರಾಮನ ದೇವಾಲಯಗಳಿದ್ದು, ಆತನ ಹೆಸರಿನಲ್ಲಿ ಜಾತ್ರೆಗಳು ನಡೆಯುವುದನ್ನು ಇಂದಿಗೂ ಕಾಣುತ್ತೇವೆ. ಕುಮ್ಮಟದುರ್ಗದಲ್ಲಿಯೇ

ಕುಮಾರ ರಾಮನ ಜಾತ್ರೆ ನಡೆಯವುದು ಇದಕ್ಕೆ ನಿದರ್ಶನ, ದರೋಜಿ ಹತ್ತಿರದ ರಾಂಪುರದಲ್ಲಿ ಚಂಡಿನಾಟದ ಉತ್ಸವ ನಡೆಯುತ್ತದೆ. ಕೊರಟಗೆರೆ ಮತ್ತು ಸುಲದಾಳಗಳಲ್ಲಿಯೂ ಕುಮಾರ ರಾಮನ ದೇವಾಲಯಗಳಿದ್ದು, ಪ್ರತಿ ವರ್ಷ ಜಾತ್ರೆ ನಡೆಯುತ್ತದೆ.

ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಐತಿಹಾಸಿಕ ವ್ಯಕ್ತಿ ಮತ್ತು ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಸ್ಫೂರ್ತಿ ಎಂದು ಪೂಜಿಸಲ್ಪಟ್ಟಿದ್ದಾನೆ. ಕುಮಾರ ರಾಮ ಕಂಪ್ಲಿ ಕೋಟೆಯ, ಕಂಪಿಲಿ ರಾಯನ ಮಗ. ಕಂಪ್ಲಿ ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿರುವ ಒಂದು ಪಟ್ಟಣವಾಗಿದೆ ಮತ್ತು ಇದು ಕಂಪ್ಲಿ ತಾಲೂಕಿನ ಕೇಂದ್ರಸ್ಥಾನವಾಗಿದೆ.

ಕುಮಾರ ರಾಮನು ವಾರಂಗಲ್‌ನ ಕಾಕತೀಯರು, ಹಳೇಬೀಡಿನ ಹೊಯ್ಸಳರು ಮತ್ತು ಉತ್ತರ ಭಾರತದ ಮುಸ್ಲಿಂ ಅರಸರ ನಡುವೆ ನಿರಂತರ ಯುದ್ಧಗಳನ್ನು ಮಾಡಿ ಜಯಶೀಲನಾಗಿದ್ದನು. ಉತ್ತಮ ಸದ್ಗುಣಗಳನ್ನು ಹೊಂದಿದ್ದ ಕುಮಾರ ರಾಮನು ತನ್ನ ಚಿಕ್ಕ ವಯಸ್ಸಿನಲ್ಲಿಯೇ ಮುಸ್ಲಿಂ ಸೇನೆಯೊಂದಿಗೆ ಹೋರಾಡಿ ಮರಣಹೊಂದಿದನು.

ಕರ್ನಾಟಕದ ಹಲವಾರು ಬುಡಕಟ್ಟುಗಳು ಕುಮಾರ ರಾಮನನ್ನು ಪೂಜಿಸುತ್ತಾರೆ, ಆತನ ಗೌರವಾರ್ಥವಾಗಿ ಅನೇಕ ದೇವಾಲಯಗಳನ್ನು ನಿರ್ಮಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಮೆನ್ನಿ ಗ್ರಾಮದಲ್ಲಿ ಒಂದು ದೇವಸ್ಥಾನವಿದೆ. ಪ್ರತಿ ವರ್ಷ ಸುತ್ತಮುತ್ತಲಿನ ಗ್ರಾಮಸ್ಥರು ಕುಮಾರ ರಾಮನ ಮುಖವಾಡಗಳನ್ನು ಮತ್ತು ಟ್ರೋಜನ್ ಹರ್ಸ್ ಅನ್ನು ಇಟ್ಟುಕೊಂಡು ಮಂಗಳಕರ ದಿನದಂದು ಪೂಜಿಸುತ್ತಾರೆ.

ಹೀಗೆ ಇತಿಹಾಸದಲ್ಲಿ ಬೇರೆ ಬೇರೆ ಆಕರಗಳಲ್ಲಿ ಕಂಡುಬರುವ ಕುಮಾರ ರಾಮ ವಿಜಯನಗರ ಪೂರ್ವದಲ್ಲಿದ್ದ ವ್ಯಕ್ತಿಯೆಂದು ನಿರ್ಣಯಿಸಬಹುದು. ಬುಡಕಟ್ಟು ಸಮುದಾಯವಾದ ಬೇಡ ಕುಲಕ್ಕೆ ಸೇರಿದ ವ್ಯಕ್ತಿಯಾಗಿದ್ದ ಈತ ಸಮರ ವೀರ ಮತ್ತು ಶೀಲವೀರನೆಂದು ಪ್ರಸಿದ್ಧವಾಗಿದ್ದಾನೆ. ಇತಿಹಾಸದಲ್ಲಿ ಕಡಿಮೆ ಅವಧಿಯಲ್ಲಿ (ಸುಮಾರು 50 ವರ್ಷ) ಇದ್ದಂತಹ ಮನೆತನ ಈತನದು. ಒಂದು ಸಣ್ಣ ರಾಜ್ಯ ಅಥವಾ ಮನೆತನ. ಇದೇ ಮನೆತನ ಮುಂದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣವಾಗಿದ್ದು ಮತ್ತು ಉತ್ತರ ಭಾರತದ ಮುಸ್ಲಿಂ ದೊರೆಗಳನ್ನು ಎದುರಿಸಿ ಅವರ ಸಾಮ್ರಾಜ್ಯ ವಿಸ್ತರಣೆಗೆ ತೊಡಕಾಗಿದ್ದುದ್ದು. ಕರ್ನಾಟಕದ ರಾಜಮನೆತನಗಳಲ್ಲಿಯೇ ಪೂಜಿಸಲ್ಪಡುವ ಏಕೈಕ ವ್ಯಕ್ತಿ ಕುಮಾರ ರಾಮ. ಈತನ ದೇವಾಲಯಗಳು ಕರ್ನಾಟಕದಾದ್ಯಂತ ಕಂಡುಬರುತ್ತವೆ.

ಕುಮಾರ ರಾಮನು ಮೂಲನಿವಾಸಿ ಹುಡುಗಿಯಾದ ರತ್ನಾಜಿಯನ್ನು ಪ್ರೀತಿಸುತ್ತಾನೆ. ಆದರೆ ಅಸಮಾನ್ಯ ಸನ್ನಿವೇಶಗಳಿಂದ ತನ್ನ ತಂದೆಯಾದ ಕಂಪಲಿಯಹೆಂಡತಿಯಾಗುತ್ತಾಳೆ. ಕುಮಾರ ರಾಮನು ಈ ಬೆಳವಣಿಗೆಯನ್ನು ವಿಧಿಯ ಪತನವೆಂದು ಪರಿಗಣಿಸಿದರೂ, ಮಹಿಳೆ ತನ್ನ ಅದೃಷ್ಟದೊಂದಿಗೆ ರಾಜಿ ಮಾಡಿಕೊಳ್ಳುವುದಿಲ್ಲ ಮತ್ತು ರಾಮನನ್ನು ಮೋಹಿಸಲು ಪ್ರಯತ್ನಿಸುತ್ತಾಳೆ. ಆದರೆ ಕುಮಾರ ರಾಮನು ನೈತಿಕತೆಯ ಪರವಾಗಿ ನಿಂತು ಶೀಲವೀರ ಎಂದು ಇತಿಹಾಸ ಗುರುತಿಸುವಂತೆ ಮಾಡುತ್ತಾನೆ.

**ಪರಾಮರ್ಶನ ಗ್ರಂಥಗಳು:**


1. ಶೇಷಶಾಸ್ತ್ರಿ ಆರ್. (2017). ಕರ್ನಾಟಕದ ವೀರಗಲ್ಲುಗಳು. ಕಾಮಧೇನು ಪುಸ್ತಕ ಭವನ. ಬೆಂಗಳೂರು.
2. ಚೆನ್ನಕ್ಕ ಎಲಿಗಾರ. (1990). ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ. ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ. ಧಾರವಾಡ.
3. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜ. (2004). ಹಂಪಿ ಜಾನಪದ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
4. ಕೃಷ್ಣಕುಮಾರ ಸಿ. ಪಿ. (2016). ಶಾಸನಶಾಸ್ತ್ರ ಪೀಠಿಕೆ. ಮಾನಸ ಬುಕ್‌ಹೌಸ್. ಮೈಸೂರು.
5. ಮಂಜುನಾಥ ಸಿ. ಯು. (2018). ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ (1150–1340). ಚಿತ್ಕಲಾ ಪ್ರಕಾಶನ. ಕುಪ್ಪಂ, ಆಂಧ್ರಪ್ರದೇಶ.
6. ಕಲಬುರ್ಗಿ ಎಂ. ಎಂ. & ವೀರಣ್ಣ ರಾಜೂರು (ಸಂ). (2000) ಹೊಸ ಕುಮಾರ ರಾಮನ ಸಾಂಗತ್ಯ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
7. ಷಣ್ಮುಖಪ್ಪ ಬೊದುರ. (2018). ಹೊಸಗನ್ನಡ ಸಾಹಿತ್ಯದಲ್ಲಿ ಕುಮಾರರಾಮ. ಗೀತಾಂಜಲಿ ಪ್ರಕಾಶನ. ಶಿವಮೊಗ್ಗ.
8. ಚಂದ್ರಕಾಂತ ಬಿಜ್ಜರಗಿ. (2017). ಕುರುಬರು ಆಳಿದ ವಿಜಯನಗರ ಸಾಮ್ರಾಜ್ಯ. ಶೈಲಚಂದ್ರ ಪ್ರಕಾಶನ. ವಿಜಯಪುರ.
9. ಪರಮಶಿವಮೂರ್ತಿ ಡಿ. ವಿ. (2009). ಕನ್ನಡ ಶಾಸನ ಶಿಲ್ಪ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.